ದಿನಾಂಕಃ 23-03-2019 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

–ಃ ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಜೆ ವಾದಿ ಪರ ವಕೀಲರಿಂದ ಃ –

ತಕರಾರು ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ . 4 ವರ್ಷ ಕಳೆದಿರುವ ಬಗ್ಗೆ ಈಗ ತಕರಾರಿನ ಅಂಶಗಳನ್ನು ಹೇಳಲಾಗುವುದಿಲ್ಲ. ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸಹ ಈಗ ನೆನಪಿಲ್ಲ ಎಂದು ಹೇಳುತ್ತಾರೆ . ಈರಜ್ಜನ ಮಗ ದಾಸಪ್ಪನಿಗೆ ಇಬ್ಬರು ಮಕ್ಕಳು ಇರುತ್ತಾರೆ .ಅವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಇರುತ್ತಾರೆ . ಸಾಕ್ಷಿ ಮತ್ತೇ ಹೇಳುವುದೇನೆಂದರೆ ಮಕ್ಕಳು ಜೀವಂತ ಇಲ್ಲ ಮೊಮ್ಮಕ್ಕಳು ಇರುತ್ತಾರೆಂದು ಹೇಳುತ್ತಾರೆ . ಮೂರು ಜನ ಮೊಮ್ಮಕ್ಕಳು ಇಬ್ಬರು ಶಿಕಾರಿಪುರದಲ್ಲಿ ಒಬ್ಬರು ಕಳವರಹಳ್ಳಿ ಸಿರಾ ತಾಲ್ಲೂಕಿನಲ್ಲಿ ಇದ್ದಾರೆ . ಅವರ ಹೆಸರು ನರಸಿಂಹಮೂರ್ತಿ , ಶಿಕಾರಿಪುರದಲ್ಲಿ ಇರುವವರ ಹೆಸರು ಭದ್ರಪ್ಪ , ಪಾರ್ವತಮ್ಮ .

ಈರಪ್ಪನ 2 ನೇ ಮಗ ದಾಸಪ್ಪನ ಭಾಗಕ್ಕೆ ಬಂದ ಸ್ವತ್ತುಗಳನ್ನು ರಂಗಪ್ಪ , ಗಿರಿಯಪ್ಪ ಹಾಗು ಭದ್ರಪ್ಪ ಅನುಭವಿಸುತ್ತಿದ್ದಾರೆ . ಒಟ್ಟಿಗೆ ಅನುಭವಿಸುತ್ತಿಲ್ಲ ಅವರವರ ಭಾಗದ್ದನ್ನು ಅನುಭವಿಸುತ್ತಿದ್ದಾರೆ .ದಾಸಪ್ಪನ ಭಾಗಕೆ ಬಂದ ಜಮೀನನ್ನು ನನ್ನ ತಂದೆ 1ನೇ ಪ್ರತಿವಾದಿ ಹಾಗು ರಂಗಪ್ಪ ಹಂಚಿಕೊಂಡಿರುತ್ತಾರೆಂದು ಹೇಳುತ್ತಾರೆ . ಆ ರೀತಿ ಭಾಗ ಮಾಡಿಕೊಳ್ಳುವಾಗ ದಾಸಪ್ಪನ ವಾರಸುದಾರರಿಗೆ ಈ ವಿಚಾರ ತಿಳಿಸಿದ್ದರೋ ಹೇಗೋ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ . ದಾಸಪ್ಪನ ವಾರಸುದಾರರಿಗೆ ತಿಳಿಸದೇ ಭಾಗ ಮಾಡಿಕೊಳ್ಳಬಾರದು ಎಂದು ನೀವು ಬೇರೆ ಭಾಗಸ್ಥರಿಗೆ ಹೇಳಿದ್ದಿರಾ ಎಂದು ಕೇಳಲಾಗಿ ಅದೇನೂ ಗೊತ್ತಿಲ್ಲ ಎಂದು ಹೇಳುತ್ತಾರೆ .

ದಿಃ 31.1.1996 ರಲ್ಲಿ ಭಾಗ ಆದಾಗ ಸರ್ವೆ ನಂಃ 43/3 ರಲ್ಲಿ ಭದ್ರಪ್ಪನಿಗೆ 3 ಎಕರೆ ಜಮೀನು ಕೊಡಲಾಗಿತ್ತು . ಬಾಯಿ ಮಾತಿನಲ್ಲಿ ವಿಭಾಗ ಆದಾಗ ಈರಜ್ಜನ ಮಗ ತಿಮ್ಮಣನಿಗೆ ಬಂದ 9 ಎಕರೆ 18 ಗುಂಟೆ ಜಮೀನು ಸರ್ವೆ ನಂಃ 43/3 ಎಂದು ಪೋಡಾಯಿತು ಎಂದು ಸೂಚಿಸುವುದು ಸರಿ ಎಂದು ಹೇಳುತ್ತಾರೆ . 1 ನೇ ಪ್ರತಿವಾದಿಗೆ ಸರ್ವೆ ನಂಃ 43/3 ರಲ್ಲಿ 3 ಎಕರೆ ನೀಡಲಾಗಿತ್ತು ಎನ್ನುವ ವಿಚಾರವನ್ನು ನನ್ನ ತಕರಾರಿನಲ್ಲಿ ಹಾಗು ಪ್ರಮಾಣ ಪತ್ರದಲ್ಲಿ ಹೇಳಿರುವ ಬಗ್ಗೆ ನೆನಪಿಲ್ಲ ಎಂದು ಹೇಳುತ್ತಾರೆ . ಸರ್ವೆ ನಂಃ 222 ರಲ್ಲಿ ಭದ್ರಪ್ಪನ ಭಾಗದ ಜಮೀನನ್ನು ಈಗ ಮಾರಾಟ ಮಾಡಿರುತ್ತಾರೆ . ಸದರಿ ಕ್ರಯಪತ್ರದಲ್ಲಿ ಭದ್ರಪ್ಪ ಹಾಗು ನನ್ನ ತಂದೆ ಇಬ್ಬರು ಸೇರಿ ಕ್ರಯ ಮಾಡಿದ್ದಾರೆಂದು ಬರೆದಿದೆ ಎಂದರೆ ಸಾಕ್ಷಿ ಸುಳ್ಳು ಎಂದು ಹೇಳುತ್ತಾರೆ . ದಾಸಪ್ಪನ ಭಾಗದ ಸ್ವತ್ತನ್ನು ಈರಜ್ಜನ ಮಗ ಈರಪ್ಪ , ತಿಮ್ಮಣ್ಣ ಹಾಗು ಆತನ ಮಕ್ಕಳಿಗೆ ಅಧಿಕಾರ ಇರಲಿಲ್ಲ ಎಂದರೆ ಸಾಕ್ಷಿ ಅಧಿಕಾರ ಇದ್ದುದರಿಂದ ಹಂಚಿಕೊಂಡಿದ್ದಾರೆಂದು ಹೇಳುತ್ತಾರೆ . ಅವರಿಗೆ ಗಂಡು ಮಕ್ಕಳು ಇಲ್ಲದ ಕಾರಣ ಬಿಟ್ಟು ಹೋಗಿದ್ದಾರೆಂದು ಹೇಳುತ್ತಾರೆ ನನಗೆ ಸರಿಯಾಗಿ ಗೊತ್ತಿಲ್ಲ ಎಂದು ಹೇಳುತ್ತಾರೆ ಆ ಬಗ್ಗೆ ಕಾಗದ ಪತ್ರ ಆಗಿತ್ತೋ ಹೇಗೋ ಗೊತ್ತಿಲ್ಲಎಂದು ಹೇಳುತ್ತಾರೆ.

ದಾಸಪ್ಪನ ಭಾಗದ ಜಮೀನು ಹಂಚಿಕೆಯಾದಾಗ ಗಿರಿಯಪ್ಪನ ಮಕ್ಕಳಾದ ನಮಗೆ ಯಾವುದೇ ಭಾಗ ಬಂದಿಲ್ಲ. ಭದ್ರಪ್ಪ , ಗಿರಿಯಪ್ಪ , ರಂಗಪ್ಪ ಇವರಿಗೆ ಹೋಗಿದೆ ಎಂದು ಹೇಳುತ್ತಾರೆ . 1 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ತಿಮ್ಮಣ್ಣನ ಸ್ವತ್ತಿನಲ್ಲಿ ಅವರಿಗೆ ಯಾವುದೇ ಭಾಗ ಕೊಟ್ಟಿಲ್ಲ ಎಂದು ಹೇಳುವುದು ಸುಳ್ಳು ಎಂದು ಹೇಳುತ್ತಾರೆ . ತಿಮ್ಮಣ್ಣನ ಭಾಗದ ಸ್ವತ್ತಿನಲ್ಲಿ 1 ನೇ ಪ್ರತಿವಾದಿಗೆ ಅರ್ಧ ಭಾಗ ಹೋಗಬೇಕಾದ್ದನ್ನು ದುರುದ್ದೇಶದಿಂದ ಹೊಡೆಯಲು ಗಿರಿಯಪ್ಪ ಹಾಗು ಅವರ ಮಕ್ಕಳಾದ ನಾವು ಮೋಸ ಮಾಡಿದ್ದೇವೆಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ಅವಶ್ಯಕ ಪಾರ್ಟಿದಾರರನ್ನು ವಾದಿಗಳು ಸೇರಿಸಿದ್ದಾರೆಂದರೆ ಸಾಕ್ಷಿ ಜಮೀನು ಮಾರಾಟ ಆಗಿದ್ದು ಖರೀದಿದಾರರನ್ನು ಸೇರಿಸಿಲ್ಲ ಎಂದು ಹೇಳುತ್ತಾರೆ . ಸರ್ವೆ ನಂಃ 222 ರಲ್ಲಿ ಬಹಳ ಹಿಂದೆಯೇ ಯಾರ ಯಾರ ಭಾಗಕ್ಕೆ ಬಂದಿತ್ತೋ ಅವರು ಮಾರಾಟ ಮಾಡಿದ್ದಾರೆಂದರೆ ಸರಿ . ವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಅರ್ಧ ಭಾಗ ಹಕ್ಕು ಇದೆ ಎಂದು ಹೇಳುವುದು ಸುಳ್ಳು ಎಂದು ಹೇಳುತ್ತಾರೆ .

ದಿಃ 31.1.1996 ರಲ್ಲಿ ವಾದಿಗಳಿಗೆ ಹಾಗು 1 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ವಿಭಾಗ ಪತ್ರವನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ . 1 ನೇ ಸ್ವತ್ತಿನಲ್ಲಿ ವಾದಿಗಳಿಗೆ 1/4 ನೇ ಭಾಗ ಇದೆ ಎಂದು ಹೇಳುವುದು ಸರಿಯಲ್ಲ . 2 ನೇ ಸ್ವತ್ತಿನಲ್ಲಿ ವಾದಿಗಳಿಗೆ ಅರ್ಧ ಭಾಗ ಇದೆ ಎಂದು ಹೇಳುವುದು ಸರಿಯಲ್ಲ . ವಾದಿಗಳಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ನಾನು ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆಂದರೆ ಸರಿಯಲ್ಲ . ದಿಃ 31.1.1996 ರಂದು ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ 1 ನೇ ಪ್ರತಿವಾದಿಗೆ ಚಿತಾವಣೆ ಮಾಡಿ ಭಾಗ ಪತ್ರವನ್ನು ಸೃಷ್ಟಿಸಿದ್ದೇವೆಂದರೆ ಸರಿಯಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಹಿರಿಯೂರು